ಶ್ರೀ ಟಿ.ಬಿ. ಜಯಚಂದ್ರ: ಉತ್ತರ ಕೊಡಲಿಲ್ಲವಲ್ಲಾ ?

ಶ್ರೀ ಸಿದ್ದರಾಮಯ್ಯ: ಇದು calling Attention.

ಅಧ್ಯಕ್ಷರು: calling Attention ಇದು.

ಶ್ರೀ ಸಿದ್ದರಾಮಯ್ಯ: Horticulture Minister ಉತ್ತರ ಕೊಡಿ.

ಶ್ರೀ ಉಮೇಶ್ ವಿ. ಕತ್ತಿ: (ಕೃಷಿ ಸಚಿವರು): ಮಾನ್ಯ ಅಧ್ಯಕ್ಷರೆ, ಹಾಸನ ಜಿಲ್ಲೆಯ ಸಕಲೇಶಪುರ ತಾಲ್ಲೂಕಿನ ಒಟ್ಟು 7,390 ಎಕರೆ ಪ್ರದೇಶದಲ್ಲಿ ಏಲಕ್ಕಿ ಬೆಳೆ ಬೆಳೆಯುತ್ತಿದ್ದು, ಸದರಿ ತಾಲ್ಲೂಕಿನ ಹತ್ತೂರು, ಎಸಳೂರು ಹಾಗೂ ಅಲಕುವಾರು ಪ್ರದೇಶಗಳಲ್ಲಿ ಏಲಕ್ಕಿ ಬೆಳೆ ಕೊಂಗ ಮತ್ತು ಕಟ್ಟೆ ರೋಗಗಳಿಗೆ ತುತ್ತಾಗಿದು, ಅಂದಾಜು 40 ರಷ್ಟು .....

ಅಧ್ಯಕ್ಷರು : ಅದಲ್ಲ. ನೀವು ಯಾವುದನ್ನು ಓದುತ್ತಿದ್ದೀರಿ ?

ಶ್ರೀ ಗೋವಿಂದ ಎಂ. ಕಾರಜೋಳ : ಮಾನ್ಯ ಅಧ್ಯಕ್ಷರೆ, ಅವರು ಬೇರೆಯದು ಓದುತ್ತಿದ್ದಾರೆ.

ಶ್ರೀ ಉಮೇಶ್ ವಿ. ಕತ್ತಿ: (ಕೃಷಿ ಸಚಿವರು) : ಏಲಕ್ಕಿ ಬೆಳೆಯದು ಓದುತ್ತಿದ್ದೇನೆ.

ಅಧ್ಯಕ್ಷರು: ಏಲಕ್ಕಿಯಲ್ಲಿ.

ಶ್ರೀ ಸಿದ್ದರಾಮಯ್ಯ: ದಾಳಿಂಬೆದು ಓದಿ.

(ಗೊಂದಲ)

ಅಧ್ಯಕ್ಷರು: ರಾಜ್ಯದಲ್ಲಿ ಹವಾಮಾನ ವೈಫಲ್ಯದಿಂದ ದಾಳಿಂಬೆ ಬೆಳೆ ಸಂಪೂರ್ಣವಾಗಿ ನಾಶವಾಗಿದ್ದು ರೈತರು ಕಂಗಾಲಾಗಿರುವ ಬಗ್ಗೆ.

ಇ) **ವಿಷಯ :** ರಾಜ್ಯದ ಹವಾಮಾನ ವೈಫಲ್ಯ ಹಾಗೂ ದುಂಡಾಣು ಅಂಗಮಾರಿ ರೋಗದಿಂದ ದಾಳಿಂಬೆ ಬೆಳೆಯು ಸಂಪೂರ್ಣ ನಾಶವಾಗಿ ರೈತರು ಕಂಗಾಲಾಗಿರುವ ಬಗ್ಗೆ.

ಶ್ರೀ ಟಿ.ಬಿ. ಜಯಚಂದ್ರ: (ಶಿರಾ): ರಾಜ್ಯದಲ್ಲಿ ಹವಾಮಾನ ವೈಫಲ್ಯ ಹಾಗೂ ದುಂಡಾಣು ಅಂಗಮಾರಿ ರೋಗದಿಂದ ದಾಳಿಂಬೆ ಬೆಳೆಯು ಸಂಪೂರ್ಣ ನಾಶವಾಗಿ ರೈತರು ಕಂಗಾಲಾಗಿದ್ದಾರೆ. ಬಹುತೇಕ ರೈತರು ಬ್ಯಾಂಕುಗಳಿಂದ ಪಡೆದಿದ್ದ ಸಾಲವನ್ನು ತೀರಿಸಲು ಸಾಧ್ಯವಾಗದೆ ಆತ್ಮಹತ್ಯೆ ಮಾಡಿಕೊಳ್ಳುವ ಹಂತದಲ್ಲಿದ್ದಾರೆ. ಸರ್ಕಾರ ರೈತರ ಸಾಲವನ್ನು ಮನ್ನಾ ಮಾಡಿ ಅವರ ಹಿತರಕ್ಷಣೆ ಕಾಪಾಡುವ ಬಗ್ಗೆ ಸರ್ಕಾರದ ಗಮನ ಸೆಳೆಯಬಯಸುತ್ತೇನೆ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ (ಸಹಕಾರ ಹಾಗೂ ಕೃಷಿ ಮಾರುಕಟ್ಟೆ ಸಚಿವರು): ಮಾನ್ಯ ಅಧ್ಯಕ್ಷರೆ.

ರಾಜ್ಯದಲ್ಲಿ ಡಿಸಿಸಿ ಬ್ಯಾಂಕುಗಳಿಂದ ಅಲ್ಪಾವಧಿ ಮತ್ತು ಮಧ್ಯಮಾವಧಿ ಸಾಲಗಳನ್ನು ಮತ್ತು ಕಾಸ್ಕಾರ್ಡ್ ಬ್ಯಾಂಕಿನಿಂದ ದೀರ್ಘಾವಧಿ ಸಾಲಗಳನ್ನು ದಾಳಿಂಬೆ ಬೆಳೆ ಸಲುವಾಗಿ ರಿಯಾಯಿತಿ ಬಡ್ಡಿ ದರದಲ್ಲಿ ಸಾಲ ನೀಡಲಾಗಿದೆ.

ಡಿ.ಸಿಸಿ ಬ್ಯಾಂಕುಗಳ ಮೂಲಕ ವಿತರಿಸಿದ ಸಾಲದ ವಿವರ.

2010–11 ನೇ ಸಾಳಿನಲ್ಲಿ ರಾಜ್ಯದ ಮೂರು ಜಿಲ್ಲಾ ಸಹಕಾರ ಕೇಂದ್ರ ಬ್ಯಾಮಕುಗಳಾದ ಬಾಗಲಕೋಟೆ ರಾಯಚೂರು ಮತ್ತು ಬಿಜಾಪುರ ಡಿಸಿಸಿ ಬ್ಯಾಂಕುಗಳಲ್ಲಿ 1979 ಸದಸ್ಯರಿಗೆ ರೂ. 872.97 ಲಕ್ಷಗಳ ದಾಳಿಂಬೆ ಬೆಳೆಗೆ ಸಾಲವನ್ನು ವಿತ್ತರಿಸಿದ್ದು, ಮಾರ್ಚ್ 2011 ರ ಅಂತ್ಯಕ್ಕೆ 2303 ಸದಸ್ಯರ ನಡುವೆ ರೂ. 1189.64 ಲಕ್ಷಗಳ ಹೊರಬಾಕಿ ಇರುತ್ತದೆ. ಈ ಪೈಕಿ 318 ಸದಸ್ಯರಿಂದ ರೂ. 131.03 ಲಕ್ಷಗಳು ಮಾತ್ರ ಸುಸ್ತಿಯಾಗಿರುತ್ತವೆ.

ಸುಸ್ತಿ ಸಾಲವು ಒಟ್ಟು ಸಾಲದ ಹೊರಬಾಕಿಗೆ ಶೇ. 11.01 ಇರುವುದರಿಂದ ಈ ಬೆಳೆಗೆ ನೀಡಿದ ಸಾಲದ ವಸೂಲಾತಿಯು ಶೇ. 88.99 ಇರುತ್ತದೆ. ಇತರೇ ಕೃಷಿ ಸಾಲಗಳ ವಸೂಲಾತಿ ಪ್ರಮಾಣವು ಶೇ. 88.19 ಇದ್ದು, ದಾಳಿಂಬೆ ಬೆಳೆಗೆ ನೀಡಿದ ಸಾಲದ ವಸೂಲಾತಿಯು ಸಹ ಇತರೇ ಕೃಷಿ ಸಾಲಗಳಷ್ಟೇ ಇರುತ್ತದೆ.

2011–12 ನೇ ಸಾಲಿನಲ್ಲಿ ಜೂನ್ ಅಂತ್ಯದ ವರೆಗೆ ರಾಜ್ಯದ ನಾಲ್ಕು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕುಗಳಾದ ಬಾಗಲಕೋಟೆ, ರಾಯಚೂರು, ಬಿಜಾಪುರ ಮತ್ತು ದಾವಣಗೆರೆ ಡಿ.ಸಿ.ಸಿ ಬ್ಯಾಂಕುಗಳಲಲಿ 288 ಸದಸ್ಯರಿಗೆ ರೂ. 104.33 ಲಕ್ಷಗಳ ದಾಳಿಂಬೆ ಬೆಳೆಗೆ ಸಾಲವನ್ನು ವಿತರಿಸಿದ್ದು, ಜೂನ್ 2011 ರ ಅಂತ್ಯಕ್ಕೆ 2567 ಸದಸ್ಯರ ನಡುವೆ ರೂ. 1276.94 ಲಕ್ಷಗಳ ಹೊರಬಾಕಿ ಇರುತ್ತದೆ. ಈ ಪೈಕಿ 294 ಸದಸ್ಯರಿಂದ ರೂ. 1116.33 ಲಕ್ಷಗಳು ಮಾತ್ರ ಸುಸ್ತಿಯಾಗಿರುತ್ತದೆ.

ಸುಸ್ತಿ ಸಾಲವು ಒಟ್ಟು ಸಾಲದ ಹೊರಬಾಕಿ ಶೇ. 9.11 ಇರುವುದರಿಂದ ಈ ಬೆಳೆಗೆ ನೀಡಿದ ಸಾಲದ ವಸುಲಾತಿಯು ಶೇ. 90.89 ಇರುತ್ತದೆ. ಇತರೇ ಕೃಷಿ ಸಾಲಗಳ ವಸೂಲಾತಿ ಪ್ರಮಾಣವು ಶೇ. 90.85 ಇದ್ದು, ದಾಳಿಂಬೆ ಬೆಳೆಗೆ ಸಾಳದ ವಸೂಲಾತಿಯು ಸಹ ಇತರೇ ಕೃಷಿ ಸಾಲಗಳಷ್ಟೇ ಇರುತ್ತದೆ.

ಕಾಸ್ಕಾರ್ಡ್ ಬ್ಯಾಂಕುಗಳ ಮೂಲಕ ವಿತರಿಸಿದ ಸಾಲದ ವಿವರ

ಕಾಸ್ಕಾರ್ಡ್ ಬ್ಯಾಂಕಿನ ಮೂಲಕ ಕೋಲಾರ, ತುಮಕೂರು, ಚಿತ್ರದುರ್ಗ, ದಾವಣಗೆರೆ, ಬೆಳಗಾವಿ, ಬಿಜಾಪುರ, ಬಾಗಲಕೋಟೆ, ಗದಗ, ಗುಲ್ಬರ್ಗಾ, ರಾಯಚೂರು, ಕೊಪ್ಪಳ, ಬೀದರ್ ಮತ್ತು ಬಳ್ಳಾರಿ ಪೀಕಾರ್ಡ್ ಬ್ಯಾಂಕುಗಳಲ್ಲಿ 2004–05ನೇ ಸಾಲಿನಿಂದ 2009–10ನೇ ಸಾಲಿಗೆ 1723ಸದಸ್ಯರಿಗೆ ರೂ. 950.54 ಲಕ್ಷಗಳ ಸಾಲ ವಿತರಿಸಿದ್ದು, ಮಾರ್ಚ್ 2011 ರ ಅಂತ್ಯಕ್ಕೆ 991 ಸದಸ್ಯರ ನಡುವೆ ರೂ. 461.78 ಲಕ್ಷಗಳ ಹೊರಬಾಕಿ ಇರುತ್ತದೆ. ಈ ಪೈಕಿ ರೂ. 181.84 ಲಕ್ಷಗಳು ಮಾತ್ರ ಸುಸ್ತಿಯಾಗಿದು ವಸೂಲಾತಿ ಶೇ. 50.71 ಇರುತ್ತದೆ.

ಇತರೇ ಕೃಷಿ ಸಾಲಗಳ ವಸೂಲಾತಿ ಪ್ರಮಾಣವು ಸಹ ಶೇ. 50.00 ರಷ್ಟಿದ್ದು. ದಾಳಿಂಬೆ ಬೆಳೆಗೆ ನೀಡಿದ ಸಾಲದ ವಸೂಲಾತಿಯು ಸಹ ಇತರೇ ಕೃಷಿ ಸಾಲಗಳಷ್ಟೇ ಇರುತ್ತದೆ.

2010–11ನೇ ಸಾಲಿನಲ್ಲಿ ಮಾರ್ಚ್ 2011 ರ ಅಂತ್ಯಕ್ಕೆ 89 ಸದಸ್ಯರ ನಡುವೆ ರೂ. 103.07 ಲಕ್ಷಗಳ ಸಾಲ ವಿತರಿಸಿದ್ದು. 1005 ಸದಸ್ಯರ ನಡುವೆ ರೂ. 481.80 ಲಕ್ಷಗಳ ಹೊರಬಾಕಿ ಹೊಂದಿದ್ದು. 134.70 ಲಕ್ಷಗಳು ಮಾತ್ರ ಸುಸ್ತಿಯಾಗಿರುತ್ತವೆ. ವಸೂಲಾತಿ ಪ್ರಮಾಣವು ಶೇ. 41.13 ರಷ್ಟಿದ್ದು. ಇತರೇ ಕೃಷಿ ಸಾಲಗಳ ವಸೂಲಾತಿಯಷ್ಟೇ ಇರುತ್ತದೆ.

ರಾಜ್ಯದಲ್ಲಿ ಇತರೇ ತೋಟಗಾರಿಕೆ ಬೆಳೆಗಳಾದ ಅಡಿಕೆ, ವೆನಿಲ್ಲಾ, ದ್ರಾಕ್ಷಿ, ಏಲಕ್ಕಿ ಬೆಳೆಗಳು ಸಹ ಅತೀವೃಷ್ಟಿಯಿಂದ ರೋಗಕ್ಕೆ ತುತ್ತಾಗಿದ್ದು ಅಥವಾ ಬೆಳೆಯು ನಾಶವಾಗಿದ್ದು, ಈ ಬೆಳೆಗಳಿಗೂ ಸಹ ಸಾಲ ಮನ್ನಾ ಮಾಡಲು ಬೇಡಿಕೆ ಇರುತ್ತದೆ.

ದಿ 08–12–2011 ರಂದು ಸನ್ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ದಾಳಿಂಬೆ ಬೆಳೆಗಾರರ ಕುರಿತು ಸುದೀರ್ಘವಾಗಿ ಚರ್ಚಿಸಲಾಗಿದೆ.

ಈ ಸಭೆಯಲ್ಲಿ ಸನ್ಮಾನ್ಯ ಮಾರುಕಟ್ಟೆ ಮತ್ತು ಸಹಕಾರ ಸಚಿವರು, ತೋಟಗಾರಿಕೆ ಸಚಿವರು, ಕೃಷಿ ಸಚಿವರು ಸಣ್ಣ ನೀರಾವರಿ ಮತ್ತು ಮತ್ತು ಕನ್ನಡ ಹಾಗೂ ಸಂಸ್ಕೃತಿ ಇಲಾಖೆ ಸಚಿವರು ಹಾಗೂ ಬೃಹತ್ ಕೈಗಾರಿಕಾ ಸಚಿವರು ಹಾಜರಿದ್ದರು.

ಮಾನ್ಯ ಶಾಸಕರುಗಳು, ಸಹಕಾರ ಮತ್ತು ತೋಟಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರು ಮುಖ್ಯಸ್ಥರುಗಳು, ಹಿರಿಯ ಅಧಿಕಾರಿಗಳು ಹಾಗೂ ದಾಳಿಂಬೆ ಬೆಳೆಗಾರರು ಸಭೆಯಲ್ಲಿ ಹಾಜರಿದ್ದರು.

ಈ ಸಭೆಯಲ್ಲಿ ಸಹಕಾರಿ ಸಂಘಗಳ ಮೂಲಕ ದಾಳಿಂಬೆ ಬೆಳೆಗೆ ನೀಡಲಾದ ಸಾಲಗಳಿಗೆ ಸಂಬಂಧಿಸಿದಂತೆ ಪರಿಹಾರ ನೀಡುವ ಕುರಿತು ಸುದೀರ್ಘವಾಗಿ ಚರ್ಚಿಸಲಾಯಿತು. ಮಾನ್ಯ ವಿರೋಧ ಪಕ್ಷದ ನಾಯಕರು ದಾಳಿಂಬೆ ಬೆಳೆ ಬೆಳೆದ ರೈತರ ಸಾಲವನ್ನು ಮನ್ನಾ ಮಾಡಬೇಕು ಎಂಬ ವಿಚಾರದಲ್ಲಿ ಸರ್ಕಾರದ ಗಮನವನ್ನು ಸೆಳೆದಿದ್ದಾರೆ. ದಿನಾಂಕ 08–12–2011 ರಂದು ಮಾನ್ಯ ಮುಖ್ಯಮಂತ್ರಗಳು ಕರೆದಿದ್ದಂತಹ ಸಭೆಯಲ್ಲಿ ಮಾನ್ಯ ಉಪ ನಾಯಕರು ಆ ಸಭೆಯಲ್ಲಿ ಅನೇಕ ಶಾಸಕರು, ಹಿರಿಯ ಅಧಿಕಾರಿಗಳು ಹಾಜರಿದ್ದರು. ಅಲ್ಲಿ ಸಾಕಷ್ಟು ಸುದೀರ್ಘವಾಗಿ ಚರ್ಚೆ ಆಯಿತು. ಸಹಕಾರ ರಂಗದ ಬ್ಯಾಂಕ್‌ಗಳಿಂದ ಯಾರು ಸಾಲವನ್ನು ಪಡೆದುಕೊಂಡಿದ್ದಾರೆ, ಅವರ ಸುಸ್ತಿ ಬಡ್ಡಿ ಹಾಗೂ ಬಡ್ಡಿಯನ್ನು ಮನ್ನಾ ಮಾಡಬೇಕು. ಸಾಲವನ್ನು ಮನ್ನಾ ಮಾಡಬೇಕು ಎಂಬ ನಿರ್ಣಯ ಆ ಸಭೆಯಲ್ಲಿ ಆಯಿತು. ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಪಡೆದಂತಹ ಸಾಲದ ಬಡ್ಡಿಯನ್ನು ಕೇಂದ್ರ ಸರ್ಕಾರ ಮನ್ನಾ ಮಾಡಬೇಕು. ಲೋನ್ ಅನ್ನು re-schedule ಮಾಡಬೇಕೆನ್ನುವ ಪ್ರಸ್ತಾವನೆಯನ್ನು Agriculture Minister , Horticulture MInister, ನಾನು ಮತ್ತು ವಿರೋಧ ಪಕ್ಷದ ಅನೇಕ ನಾಯಕರು, ಹಿರಿಯ ನಾಯಕರೊಂದಿಗೆ ಕೇಂದ್ರ ಸರ್ಕಾರಕ್ಕೆ ಒಂದು delegation ತೆಗದುಕೊಂಡು ಹೋಗಿ ಅವರಿಗೆ ಮನವಿ ಮಾಡಬೇಕು ಎನ್ನತಕ್ಕ ಒಂದು ವಿಚಾರವನ್ನು ಅವತ್ತಿನ ದಿನ ನಿರ್ಣಯ ಮಾಡಿ, ಆ ಒಂದು ಪ್ರಯುಕ್ತವಾಗಿ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಬೇಕು. ರಾಷ್ಟ್ರೀಕೃತ ಬ್ಯಾಂಕ್ ಗಳಿಂದ ಪಡೆದಂತಹ ಸಾಲವನ್ನು re-schedule ಮಾಡುವುದಾಗಲೀ ಅಥವಾ ಕೇಂದ್ರ ಸರ್ಕಾರ ಬಹಳಷ್ಟು ದಯಾಳು ಗುಣವನ್ನು ತೋರಿಸಿ, ಸಾಲವನ್ನು ಮನ್ನಾ ಮಾಡಿದರೂ ಕೂಡ ನಮ್ಮದು ಯಾವುದೇ ತರಹದ ಅಭ್ಯಂತರ ಇಲ್ಲ. ಮೊದಲು ಸಾಲ ಮನ್ನಾವನ್ನು ಕೇಳೋಣ. ಅದು ಆಗದಿದ್ದರೆ ಬಡ್ಡಿ ಮನ್ನಾವನ್ನು ಕೇಳೋಣ. ಅದರ ಜೊತೆಗೆ ಸಾಲವನ್ನು re-schedule ಮಾಡುವುದನ್ನು ಕೇಳೊಣ. ರಾಜ್ಯ ಸರ್ಕಾರ ತಮ್ಮದೇ ಆಗಿರತಕ್ಕಂತಹ ಸಹಕಾರಿ ಕ್ಷೇತ್ರದ ಮುಖಾಂತರ ಏನು ಸಾಲವನ್ನು ಕೊಟ್ಟಿದ್ದೇವೆ, ಆ ಸಾಲದ ಬಡ್ಡಿ ಮನ್ನಾ ಮಾಡುವುದರ ಜೊತೆಗೆ ಸಾಲವನ್ನು re-schedule ಮಾಡಬೇಕು ಎನ್ನತಕ್ಕದ್ದು ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಿರ್ಣಯ ಆಗಿದೆ. ಅದಕ್ಕೆ ಕೆಲವೇ ದಿನದಲ್ಲಿ ಸರ್ಕಾರ ಆದೇಶವನ್ನು ಕೂಡ ಹೊರಡಿಸುತ್ತೇವೆಂದು ತಮ್ಮ ಮೂಲಕ ಎಲ್ಲಾ ಮಾನ್ಯ ಸದಸ್ಯರಿಗೆ ತಿಳಿಸಿ ಬಯಸುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಅಲ್ಲಿ ಏನು ನಡೆಯಿತು, ಅದರ ಕಥೆಯನ್ನೆಲ್ಲಾ ಇಲ್ಲಿ ಬರೆದಿದ್ದಾರೆ. ಬಹುಶಃ ತೀರ್ಮಾನ ಏನು ಎಂದು ಸ್ಪಷ್ಟವಾಗಿ

ಗೊತ್ತಾಗಲಿಲ್ಲ. ಮಾನ್ಯ ಮಖ್ಯಮಂತ್ರಿಗಳ ಬಾಯಲ್ಲಿ ಗೊತ್ತಾಗುತ್ತದೆ ಎಂದು ನಾನು ಅಂದುಕೊಂಡಿದ್ದೆ. ತಾವೇ ಹೇಳಿದ್ದೀರಿ. ಏಕೆ ಹೇಳುತ್ತಿದ್ದೇನೆಂದರೆ ಇಲ್ಲಿ ಎರಡು ವಿಚಾರ ಇದೆ. Co-operative ಸಾಲ ಏನು ಇದೆ, ಅದನ್ನು re-schedule ಮಾಡಿ ಬಡ್ಡಿ ಮನ್ನಾ ಮಾಡತಕ್ಕದ್ದು. ಒಂದು ವಿಚಾರವನ್ನು ಒಪ್ಪಿಕೊಂಡ ಹಾಗೆ ಕಾಣುತ್ತದೆ. ಅದು ಸಂತೋಷದ ವಿಚಾರ. ಎರಡನೆಯದು ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಮಾಡಿರತಕ್ಕ ಸಾಲದ ವಿಚಾರದಲ್ಲಿ ಕೇಂದ್ರ ಸರ್ಕಾರದ ಮುಂದೆ ಹೋಗತಕ್ಕದ್ದರ ಬಗ್ಗೆ ನಾವು ಆ ಸಭೆಯಲ್ಲಿ ಆತಂಕವನ್ನು ವ್ಯಕ್ತಪಡಿಸಿದ್ದೇವೆ. ಈ ಕ್ರಾಪ್ ಬರತಕ್ಕದ್ದು, ಇದು plantation crop ಆಗವುದಿಲ್ಲ. ಇದು ರಾಜ್ಯ ಸರ್ಕಾರದ ವ್ಯಾಪ್ತಿಯಲ್ಲಿ ಬರುತ್ತದೆ. ಅದರಿಂದ ಇವರೇ ಮಾಡಬೇಕೆಂಬ ಒತ್ತಡವನ್ನು ಮಾಡಿದ್ದೇವೆ. ಆದರೂ ಕೂಡ ಕೇಂದ್ರ ಸರ್ಕಾರದ ಗಮನಕ್ಕೆ ತರಬೇಕು ಎನ್ನುವುದರ ಬಗ್ಗೆ ನಮ್ಮ ಅಭ್ಯಂತರ ಏನೂ ಇಲ್ಲ ಎನ್ನತಕ್ಕಂತಹ ಮಾತನ್ನು ಕೂಡ ಹೇಳಿದ್ದೇವೆ. ಆದರೆ ಒಂದು ಮಾತನ್ನು ಹೇಳುತ್ತೇನೆ. ಏಕೆ ನಾನು ಈ ಸಂದರ್ಭದಲಲಿ ರೈತರ ನೆರವಿಗೆ ಬರಬೇಕು ಎಂದರೆ ಬಹುಶಃ ರೈತರು ಅನಾದಿ ಕಾಲದಿಂದಲೂ ಕೂಡ ದಾಳಿಂಬೆಯನ್ನು ಬೆಳೆದುಕೊಂಡಿದ್ದರು. ಅದು ನಮ್ಮ local variety. ಅದು original variety ಗಣೇಶ, ಜ್ಯೋತಿ ಎಂಬ variety ಯನ್ನು ಬೆಳೆದುಕೊಂಡಿದ್ದರು. ನಾವು ಅದರಲ್ಲಿ ಒಳ್ಳೆಯ export potential ಇದೆ ಎನ್ನುವ ಕಾರಣಕ್ಕೋಸ್ಕರ ಆ ಬಾಕ್ವಾ ಅನ್ನತಕ್ಕದ್ದನ್ನು ಆ ಯೂನಿವರ್ಸಿಟಿಯವರ ಸಲಹೆಯ ಮೇರೆಗೆ ಇವತ್ತು ಬೆಳೆಯುವುದಕ್ಕೆ ಪ್ರಾರಂಭವಾಗಿ ಇವತ್ತು ಅದಕ್ಕೆ ಏನೆಲ್ಲಾ ರೋಗಗಳು ಬಂದಿವೆ. Bactrial blight ಎಲ್ಲಾ ಬಂದು ಸುಟ್ಟು ಹೋಯಿತು. ದುಂಡಾಣು ರೋಗ ಬಂದು ಇವತ್ತು ಸಂಪೂರ್ಣ ನಿರ್ನಾಮ ಆಗಿ ಹೋಗಿದ್ದಾವೆ. ಆ ಬೆಳೆ ಮಾಡುತ್ತಿದ್ದಂತಹ ರೈತರು ನಿರ್ನಾಮ ಆಗಿ ಹೋಗಿದ್ದಾರೆ. ಹಾಗಾಗಿ ಇವತ್ತು ಸಂಪೂರ್ಣ ತೊಂದರೆಯಲ್ಲಿರತಕ್ಕವರಿಗೆ ಸಂಪೂರ್ಣ ಸಾಲವನ್ನು ಮನ್ನಾ ಮಾಡತಕ್ಕ ರೀತಿಯಲ್ಲಿ ಯೋಚನೆ ಮಾಡತಕ್ಕಂತಹ ರೀತಿಯಲ್ಲಿ ಯೋಚನೆ ಮಾಡಬೇಕಾಗಿದ್ದು ಧರ್ಮ. ಏಕೆಂದರೆ ಅವರು ಬೆಳೆದಂತಹ ಬೆಳೆಯಿಂದಾಗಿ ಇವತ್ತು ನಿಮಗೆ ಸಾಕಷ್ಟು ಉತ್ಪತ್ತಿ ಬಂದಿದೆ, ಟ್ಯಾಕ್ಸ್ ಬಂದಿದೆ ಮತ್ತು export ಆಗಿದೆ. ಇದನ್ನೂ ಕೂಡ ಗಮನದಲ್ಲಿಟ್ಟುಕೊಂಡು ಬಹುಶಃ ಇದನ್ನು ಏನಾದರೂ revive ಮಾಡುವುದಕ್ಕೆ ಸಾಧ್ಯನಾ ಎಂದು ಹೇಳಿದರೆ ಖಂಡಿತ revive ಮಾಡುವುದಕ್ಕೆ ಸಾಧ್ಯ ಇಲ್ಲ ಎಂದರೆ ಅದಕ್ಕೆ ಒಂದು package ಮಾಡಿ. package ಎಂದರೆ ಆ research ಅನ್ನು strengthen ಮಾಡುವುದದಕ್ಕೆ ಒಂದು ಪ್ಯಾಕೇಜನ್ನು ಘೋಷಣೆ ಮಾಡಿ. ಆ ರೋಗಕ್ಕೆ

ಪರಿಹಾರ ಏನು ಎನ್ನತಕ್ಕದ್ದರ ಬಗ್ಗೆ ಇವತ್ತು IHR ಇದೆ, ಅವರ ಸಹಾಯದಿಂದ ರೋಗವನ್ನು ಕಂಡು ಹಿಡಿಯುವುದಕ್ಕೆ ಸಾಧ್ಯ ಆಗುತ್ತದೆ. ಯಾವುದಾದರೂ ಒಂದು Horticulture University ಗೆ ಅದನ್ನು authorize ಮಾಡಿ ಅದನ್ನು ಕಂಡು ಹಿಡಿಯತಕ್ಕಂತಹ ಕೆಲಸವನ್ನು ಮಾಡತಕ್ಕದ್ದು ಒಂದು. ಎರಡನೆಯದು ಇದು export potential ಇರುವುದರಿಂದ ಇದನ್ನು ಇಷ್ಟಕ್ಕೇ ಬಿಡತಕ್ಕದ್ದಲ್ಲ. ಅದನ್ನು ಮತ್ತೆ ರೈತರ ಕೈಯಲ್ಲಿ ಬೆಳೆಸತಕ್ಕಂತಹ ರೀತಿಯಲ್ಲಿ ಮತ್ತೆ ರೈತರು ಆ ಬೆಳೆಯನ್ನು ಬೆಳೆಯತಕ್ಕ ವಿಶ್ವಾಸ ಬರತಕ್ಕ ರೀತಿಯಲ್ಲಿ ಸರ್ಕಾರ ವರ್ತನೆ ಮಾಡಬೇಕಾಗುತ್ತದೆ. ಅದು ಬಹಳ ಮುಖ್ಯವಾಗುತ್ತದೆ. ಆದ್ದರಿಂದ ಅವರು ಸಾಲ ಬಾಧೆಯಿಂದ ತಂದರೆ ಆಗಿರತಕ್ಕಂತಹ ರೈತರಿಗೆ ಪರಿಹಾರವನ್ನು ಮೊದಲು ಕೊಡಬೇಕು. ಅದಕ್ಕೆ ತಾವು ಸ್ಪಷ್ಟವಾಗಿ ಹೇಳಿದರೆ ಒಳ್ಳೆಯದು. ರೈತರು ಅಲ್ಲಿದಾಗ ಹೇಳಿದರು. ಬಿಜಾಪುರ, ಬಾಗಲಕೋಟೆಯಿಂದ ಬಂದಿರತಕ್ಕಂತಹ ರೈತರು ನಮ್ಮ ಮನೆಗಳ ಜಪ್ತಿ ಆಗುತ್ತಿದೆ. ಎನ್ನತಕ್ಕ ಮಾತನ್ನು ಹೇಳಿದರು. ಬಹುಶಃ ಬ್ಯಾಂಕ್‌ನವರು ಮಾಡೇ ಮಾಡುತ್ತಾರೆ. ಅಂತಹ ಸಂದರ್ಭದಲ್ಲಿ ಬಹುಶಃ ಯಾರಿಗೋಸ್ಕರ ಇವತ್ತು ಸರ್ಕಾರ ಕೊಟ್ಟದ್ದಂತಹ ಆ ಬಾಕ್ವಾ ಬೆಳೆಯನ್ನು ಬೆಳೆಯವುದಕ್ಕೆ ಹೋಗಿ, ಇವತ್ತು ರಾಜ್ಯಕ್ಕೆ ಹೆಸರು ಬರಲಿ, ದೇಶಕ್ಕೆ ಹೆಸರು ಬರಲಿ ಎಂದು ಬೆಳೆದು ಕಷ್ಟವಾಗಿರುವಂತಹ ಸಂದರ್ಭದಲ್ಲಿ ರೈತನಿಗೆ ತಾವು ಸ್ಪಂದಿಸಬೇಕು. ದಯಮಾಡಿ ಅದಕ್ಕೆ ನಿರ್ದಿಷ್ಟವಾಗಿ ಇಂತಹ ಪರಿಹಾರಗಳನ್ನು ಕೊಡುತ್ತೇವೆ ಎನ್ನತಕ್ಕ ರೀತಿಯಲ್ಲಿ ಹೇಳಿದರೆ ಅದು ಬಹಳ ಸೂಕ್ತವಾಗುತ್ತದೆ ಎಂದು ಹೇಳುತ್ತೇನೆ.

ಶ್ರೀ ಶಿವರಾಜ್ ತಂಗಡಗಿ: ಮಾನ್ಯ ಅಧ್ಯಕ್ಷರೆ, ಒಂದೇ ಒಂದು ವಿಚಾರ ಹೇಳುತ್ತೇನೆ

ಅಧ್ಯಕ್ಷರು: ತಾವು ಸಿಗ್ನೇಟರಿ ಅಲ್ಲ, please

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ: ನಾನು ಜಿಲ್ಲಾ ಉಸ್ತುವಾರಿ ಮಂತ್ರಿ ಇದ್ದೇನೆ. ನನಗೆ ಎಲ್ಲಾ ವಿಚಾರ ಗೊತ್ತಿದೆ.

ಶ್ರೀ ಶಿವರಾಜ್ ತಂಗಡಗಿ: ನಾನು announce ಮಾಡುತ್ತಾರೆಂದು ಆಸೆ ಪಟ್ಟಿದ್ದೆ.

ಶ್ರೀ ಸಿದ್ದರಾಮಯ್ಯ: ಆದರೂ ಅವರು ಹೇಳಲಿ

ಶ್ರೀ ಶಿವರಾಜ್ ತಂಗಡಗಿ: ಮಾನ್ಯ ಅಧ್ಯಕ್ಷರೆ, ಈಗಾಗಲೇ 13 ಜಿಲ್ಲೆಗಳಲ್ಲಿ ಮೊನ್ನೆ ಹೇಳಿದರು. ಮಾನ್ಯ ಮುಖ್ಯಮಂತ್ರಿಗಳು ಕರೆದು ಸಭೆ ಮಾಡಿದಂತಹ ಸಂದರ್ಭದಲ್ಲಿ ಒಂದು ಸ್ಪಷ್ಟ ವಿಚಾರ ಬರಬೇಕಿತ್ತು. ಈಗ ಕೇಂದ್ರ ಸಕಾರದ ಮೇಲೆ ಹಾಕುವುದು. ಅದನ್ನು ಕೇಂದ್ರ ಸರ್ಕರದ ಮೇಲೆ ಜವಾಬ್ದಾರಿ ಹಾಕುವುದಕ್ಕಿಂತ ನಮ್ಮ ವೈಯಕ್ತಿಕ ವಿಚಾರ

ಎಂದರೆ ರೈತರ ಬಗ್ಗೆ ಒಂದು ಕಾಳಜಿಯನ್ನು ಇಟ್ಟುಕೊಂಡು ನಾವೇನು ಹೇಳುವುದು ಎಂದರೆ ಈಗ ಬರೇ ಸಹಕಾರಿ ಬ್ಯಾಂಕ್‌ನಲ್ಲಿರುವ ಸಾಲವೇ ಒಂದರಿಂದ ಎರಡು ಕೋಟಿ ರೂಪಾಯಿ ಮಾತ್ರ. ಅದನ್ನು ಮಾಡುವುದರಿಂದ ಇಡೀ 13 ಜಿಲ್ಲೆಯ ರೈತರಿಗೆ ಒಳ್ಳೆಯದಾಗುವುದಿಲ್ಲ. ಅದಕ್ಕೆ ನಾವೇನು ಹೇಳುವುದು ಎಂದರೆ ಪೂರಾ ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಕೊನೆಯಪಕ್ಷ ಬಡ್ಡಿಯನ್ನಾದರೂ ಸರ್ಕಾರವೇ ಮುಂದಾಗಿ ಮನ್ನಾ ಮಾಡಬೇಕು. ಏಕೆಂದರೆ ರೈತರ ಬಗ್ಗೆ ಕಾಳಜಿ ಇರುವಂತಹ ಸರ್ಕಾರ ಇರುವುದರಿಂದ ನಾವು ರೈತರ ಬಡ್ಡಿಯನ್ನಾದರೂ ಮನ್ನಾ ಮಾಡಿದರೆ ರೈತರು ಖುಷಿ ಆಗುತ್ತಾರೆ. ದಯಮಾಡಿ ಜಿಲ್ಲಾ ಉಸ್ತುವಾರಿ ಮಂತ್ರಿಗಳು ಗಮನಿಸಬೇಕು. ನಮ್ಮ ಜಿಲ್ಲೆಯಲ್ಲಿ ಜಾಸ್ತಿ ದಾಳಿಂಬೆ ಬೆಳೆಯನ್ನು ಬೆಳೆದು ಬಹಳಷ್ಟು ರೈತರು ಉಪವಾಸ ಕುಳಿತರೂ ಅವರು ಮಾತನಾಡಲಾರ ಪರಿಸ್ಥಿತಿ ನಿರ್ಮಾಣ ಆಗಿದೆ. ಅದಕ್ಕೆ ನಾನು ನಿಮ್ಮ ಮುಖಾಂತರ ವಿನಂತಿ ಮಾಡಿಕೊಳ್ಳುತ್ತೇನೆ. ಅವರು ದಯಮಾಡಿ ರೈತರ ಬಗ್ಗೆ ಕಾಳಜಿ ಇರುವುದರಿಂದ, ಸಹಕಾರಿ ಮಂತ್ರಿಗಳೂ ಇರುವುದರಿಂದ, ಮಾನ್ಯ ಮುಖ್ಯಮಂತ್ರಿಗಳೂ ಇಲ್ಲಿರುವುದರಿಂದ ಆ ದಾಳಿಂಬೆ ಬೆಳೆಗಾರರ ರಾಷ್ಟ್ರೀಕೃತ ಬ್ಯಾಂಕ್‌ನ ಬಡ್ಡಿಯನ್ನಾದರೂ ಮನ್ನಾ ಮಾಡಬೇಕೆಂದು ತಮ್ಮ ಮುಖಾಂತರ ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಸಿದ್ದರಾಮಯ್ಯ: ಉತ್ತರ statement ನಲ್ಲಿ ಇಲ್ಲ. ಸುಮ್ಮನೇ ಯಾರ್ಯಾರು ಎಲ್ಲೆಲ್ಲಿ ಸಾಲ ಮಾಡಿದ್ದಾರೆ ಎಂದು ಹೇಳಿದ್ದೀರಿ. ಮಾನ್ಯ ಮುಖ್ಯಮಂತ್ರಿಗಳು ಸಭೆ ಮಾಡಿದ್ದಾರೆ ಎಂದು ಹೇಳಿದ್ದೀರಿ. ನೀವು ಸ್ಪಷ್ಟವಾಗಿ ಹೇಳಬೇಕು. You please come out. ರೈತರಿಗೆ ತೊಂದರೆ ಆಗಿದೆ, ದಾಳಿಂಬೆ ಬೆಳೆಗಾರರಿಗೆ ತೊಂದರೆ ಆಗಿದೆ ಎನ್ನತಕ್ಕದ್ದು ನಿಮ್ಮ ಗಮನಕ್ಕೂ ಬಂದಿದೆ. ನೀವು In-charge Minister ಇದ್ದೀರಿ. You are aware of the facts. ಹಾಗಿರುವುದರಿಂದ ನಾವು ಬೆಳೆಗಾರರಿಗೆ ಪರಿಹಾರ ಕೊಡುತ್ತೇವೆ, ದಾಳಿಂಬೆ ಬೆಳೆಗಾರರನ್ನು ಉಳಿಸತಕ್ಕ ಕೆಲಸವನ್ನು ಮಾಡುತ್ತೇವೆಂದು you please come out. ಅದನ್ನು ಹೇಳಿ. ಅದನ್ನು ಏನೂ ಹೇಳದೇ ಬರೇ ಮಾನ್ಯ ಮುಖ್ಯಮಂತ್ರಿಗಳು ಸಭೆ ಮಾಡಿದ್ದರು, ಎಂ.ಎಲ್.ಎ.ಗಳು ಪಾರ್ಟಿಸಿಪೇಟ್ ಮಾಡಿದ್ದರು. ಇಂತಿಂತಹ ಬ್ಯಾಂಕ್‌ಗಳಲ್ಲಿ ಇಷ್ಟಿಷ್ಟು ಸಾಲವನ್ನು ತೆಗೆದು ಕೊಂಡಿದ್ದಾರೆ, ಆ ತರಹ ಹೇಳುವುದರಿಂದ ಏನೂ ಪ್ರಯೋಜನ ಆಗುವುದಿಲ್ಲ. ರೈತರಿಗೆ ಉಪಯೋಗ ಆಗುವುದಿಲ್ಲ ರೈತರು ಈಗ ಅವರ ಸಾಲವನ್ನು ಮನ್ನಾ ಮಾಡಬೇಕೆಂದು ಒತ್ತಾಯ ಮಾಡುತ್ತಿದ್ದಾರೆ. ಏನೇನು ಪರಿಹಾರವನ್ನು ಸರ್ಕಾರದಿಂದ ಕೊಡುವುದಕ್ಕೆ ಸಾಧ್ಯವಾಗುತ್ತದೆ? ಅದನ್ನು ಕೊಡತಕ್ಕ ಕೆಲಸಕ್ಕೆ ನೀವು ಮುಂದಾಗಬೇಕು. ರೈತರ ಕಷ್ಟಕ್ಕೆ ಇವರು ಸ್ಪಂದಿಸಬೇಕು.

ಶ್ರೀ ಲಕ್ಷ್ಮಣ ಎಸ್. ಸವದಿ: ಸನ್ಮಾನ್ಯ ಅಧ್ಯಕ್ಷರೆ, ನಾನು ಉತ್ತರದಲ್ಲಿ ಬಹಳ ಸ್ಪಷ್ಟವಾಗಿ ಹೇಳಿದ್ದೇನೆ. ಸಹಕಾರಿ ಬ್ಯಾಂಕ್‌ಗಳ ಮುಖಾಂತರ ದಾಳಿಂಬೆ ಬೆಳೆಗಾರರು ಪಡೆದುಕೊಂಡಿರತಕ್ಕಂಥ ಸಾಲದ ಬಡ್ಡಿಯನ್ನು ನಾವು ಸಂಪೂರ್ಣವಾಗಿ ಮನ್ನಾ ಮಾಡುತ್ತೇವೆ. ಅದು PLD Bank ಇರಬಹುದು ಅಥವಾ DCC ಬ್ಯಾಂಕ್‌ಗಳ ಮುಖಾಂತರ ಪಡೆದುಕೊಂಡಿರತಕ್ಕಂಥ ಸಾಲ ಇರಬಹುದು, ಎರಡೂ sector ನಲ್ಲಿ ಸಾಲ ಪಡೆದುಕೊಂಡಿರತಕ್ಕಂಥ ದಾಳಿಂಬೆ ಬೆಳೆಗಾರರು ಇಡೀ ರಾಜ್ಯದಲ್ಲಿ ಯಾರಿದ್ದಾರೆ, ಅಂತಹ ಬೆಳೆಗಾರರಲ್ಲಿ ಸುಸ್ತಿದಾರರು ಯಾರಿದ್ದಾರೋ, ಅಂತಹ ಸುಸ್ತಿದಾರರ ಸಂಪೂರ್ಣ ಬಡ್ಡಿಯನ್ನು ಸರ್ಕಾರವೇ ಭರಿಸುತ್ತದೆ. ಒಟ್ಟಾರೆ ಬಡ್ಡಿ ಮನ್ನಾ ಮಾಡುತ್ತೇವೆ. ಸುಸ್ತಿ ಬಡ್ಡಿಯನ್ನೂ ಸಹ ನಾವು ಮನ್ನಾ ಮಾಡುತ್ತೇವೆ. ಸುಸ್ತಿ ಬಡ್ಡಿ ಮನ್ನಾ ಮಾಡಿದಾಗ, ಇನ್ನು ಉಳಿದಿರತಕ್ಕಂಥ ಅವರ ಅಸಲನ್ನು ನಾವು ಪರಿವರ್ತನೆ ಮಾಡಿಕೊಡುತ್ತೇವೆ. ಬ್ಯಾಂಕ್‌ಗಳವರು ವಸೂಲಾತಿಗೆಂದು ಹೋದಂತಹ ಸಂದರ್ಭದಲ್ಲಿ harass ಮಾಡುತ್ತಾರೆಂದು ಮಾನ್ಯ ವಿರೋಧ ಪಕ್ಷದ ಉಪ ನಾಯಕರು ಹೇಳಿದರು. ಕಟ್ಟಬೇಕಾಗಿರುವಂಥದ್ದು ಬಾಕಿ ಇದ್ದಾಗ ಅವರು harass ಮಾಡುತ್ತಾರೆ ಕಟ್ಟಬೇಕಾಗಿರುವಂತದ್ದನ್ನು ನಾವು re-schedule ಮಾಡಿಕೊಡುತ್ತೇನೆ. ಬಡ್ಡಿ ಮನ್ನಾ ಮಾಡುತ್ತೇವೆ. ನಾನು ತಮ್ಮಲ್ಲಿ ಒಂದು ವಿನಂತಿಯನ್ನು ಮಾಡುತ್ತೇನೆ. ತಾವು ಇವತ್ತು ರೈತರ ಬಗ್ಗೆ ಕಾಳಜಿಯನ್ನು ಹೊತ್ತು. ಅತ್ಯಂತ ಗಂಭೀರವಾದ ಈ ವಿಷಯದ ಬಗ್ಗೆ ಸರ್ಕಾರದ ಗಮನವನ್ನು ಸೆಳೆದಿದ್ದೀರಿ. ಸರ್ಕಾರದ ಪರವಾಗಿಯೂ ಸಹ ತಮ್ಮಲ್ಲೊಂದು ವಿನಂತಿ ಇದೆ. ರಾಷ್ಟ್ರೀಕೃತ ಬ್ಯಾಂಕ್ ಗಳಿಂದ ಸಾಲ ಪಡೆದಿರುವ ಅನೇಕ ರೈತರು ಇವತ್ತು ತೊಂದರೆಯಲ್ಲಿದ್ದಾರೆ. ಅದಕ್ಕಾಗಿ ನಾನು ತಮ್ಮಲ್ಲಿ ವಿನಂತಿ ಮಾಡುತ್ತೇನೆ. ಸರ್ಕಾರದ delegation ಕೇಂದ್ರಕ್ಕೆ ಹೋದ ಸಂದರ್ಭದಲ್ಲಿ ಅದು Agriculture Minister ಇರಬಹುದು, Horticulture Minister ಇರಬಹುದು ಅಥವಾ ನಾನು ಇರಬಹುದು, ಅದರ ಜೊತೆಗೆ ವಿರೋಧ ಪಕ್ಷದ ನಾಯಕರು ಮತ್ತು ಉಪ ನಾಯಕರು ನಮ್ಮ ಜೊತೆಗೆ ಬರಬೇಕು. ನೀವೂ ಸಹ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹಾಕಬೇಕು. ಕರ್ನಾಟಕ ಸರ್ಕಾರ ಯಾವ ರೀತಿಯಾಗಿ ಕ್ರಮ ಕೈಗೊಂಡಿದೆಯೋ, ಅದೇ ತರಹದಲ್ಲಿ ಕೇಂದ್ರ ಸರ್ಕಾರವೂ ಸಹ ರಾಷ್ಟ್ರೀಕೃತ ಬ್ಯಾಂಕ್ ಗಳ ಮುಖಾಂತರ ಪಡೆದುಕೊಂಡಿರತಕ್ಕಂಥ ಸಾಲದ ವಿಚಾರದಲ್ಲಿ ಕ್ರಮ ಕೈಗೊಳ್ಳಬೇಕೆಂದು ತಾವು ಸಹ ನಮ್ಮೊಂದಿಗೆ ದೆಹಲಿಗೆ ಬಂದು ಕೇಂದ್ರ ಸರ್ಕಾರದ ಮೇಲೆ ಒತ್ತಡ ಹಾಕುವಂತಹ ಕೆಲಸವನ್ನು ಮಾಡಬೇಕೆಂದು ತಮ್ಮ ಮುಖೇನ ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ನಾನು ವಿನಂತಿಸಿಕೊಳ್ಳುತ್ತೇನೆ.